1	2	3	4
127	152	Puttur-State Bank-Puttur	Ordinary
128	153	Puttur-Kasaragodu-Bangalore	Rajahamsa
129	154	Bangalore-Kasaragodu-Puttur	Rajahamsa
130	155	Puttur-Vitla-State Bank-Puttur	Ordinary
131	156	Puttur-Vitla-Mangalore-State Bank-Puttur	Ordinary

675(1342) ಶ್ರೀ ಅಂಗಾರ ಎಸ್. (ಸುಳ್ಯ) : ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಾಲ್ಸೂರು–ಬೆಂಗಳೂರು ರಸ್ತೆಯು ಅಂತರ್‌ರಾಜ್ಯ ಸಂಪರ್ಕ ಕಲ್ಪಿಸುವ ರಸ್ತೆಯಾಗಿದ್ದು, ಪವಿತ್ರ ಪುಣ್ಯ ಕ್ಷೇತ್ರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಾಲಯಕ್ಕೆ ಬರುವ ರಸ್ತೆಯಾಗಿದ್ದು, ಯಾತ್ರಾರ್ತಿಗಳಿಗೆ ಹೋಗಿ ಬರುವುದಕ್ಕೆ ತುಂಬಾ ತೊಂದರೆಯಾಗಿರುವುದಲ್ಲದೆ, ಸದರಿ ರಸ್ತೆಯಲ್ಲಿ ಹೊಂಡ ಗುಂಡಿಗಳು ಬಿದ್ದು, ವಾಹನ ಸಂಚಾರಕ್ಕೆ ಹಾಗೂ ಜನಸಂಪರ್ಕಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗುವುದು; ಎಷ್ಟು ಸಮಯದಲ್ಲಿ ದುರಸ್ಥಿಗೊಳಿಸಲಾಗುವುದು (ಪೂರ್ಣ ವಿವರ ನೀಡುವುದು)

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) :

ಅ) ಹೌದು.

ಆ) ಈ ರಸ್ತೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಮಗದ 2005–08ರ ಮೂರು ವರ್ಷದ ರಾಜ್ಯ ಹೆದ್ದಾರಿ ಯೋಜನೆಯಡಿಯಲ್ಲಿ ನಿರ್ವಹಣೆಗಾಗಿ ಮಂಗಳೂರು ಲೋಕೋಪಯೋಗಿ ವಿಭಾಗದ ವತಿಯಿಂದ ತೆಗೆದುಕೊಳ್ಳಲಾಗಿದೆ. ನಿರ್ವಹಣೆಗೆ ತೆಗೆದುಕೊಂಡ ರಸ್ತೆಯ ಒಟ್ಟು ಉದ್ದ 46.40 ಕಿಮೀ. ಮತ್ತು ಅಂದಾಜು ಮೊತ್ತ 253.84 ಲಕ್ಷಗಳು. ಗುತ್ತಿಗೆದಾರರು ಕಾಮಗಾರಿಯನ್ನು ದಿನಾಂಕ: 15–9–2005 ರಲ್ಲಿ ಪ್ರಾರಂಭಿಸಿದ್ದು, ಇಲ್ಲಿಯವರೆಗಿನ ಪ್ರಗತಿಯ ವಿವರ ಕೆಳಗಿನಂತಿದೆ.

ವಿವರ	ಒಟ್ಟು ಉದ್ದ ಕಿಮೀ.ಗಳಲ್ಲಿ	ಸಾಧಿಸಿದ ಪ್ರಗತಿ ಕಿಮೀ.ಗಳಲ್ಲಿ
ಗುಂಡಿ ಮುಚ್ಚುವುದು	46.40	40.00
ಮರುಡಾಂಬರೀಕರಣ	38.40	–

ಬರ್ಮ್ ಕಟಿಂಗ್	–	–
ಡ್ರೈನ್	1.90	–
ಜಂಗಲ್ ಕ್ಲಿಯರೆನ್ಸ್	46.40	–

ಈ ರಸ್ತೆಯಲ್ಲಿನ ಎಲ್ಲಾ ನಿರ್ವಹಣೆಯ ಕಾಮಗಾರಿಗಳನ್ನು ಗುತ್ತಿಗೆದಾರರು ದಿನಾಂಕ: 15–9–2006ರ ಒಳಗೆ ಪೂರ್ತಿಗೊಳಿಸಬೇಕಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ.

676(1124) ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣ : ಮಾನ್ಯ ಪ್ರವಾಸೋದ್ಯಮ, ಜವಳಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ–ಗದಗ ರೈಲ್ವೆ ಬ್ರಾಡ್‌ಗೇಜ್ ಕಾಮಗಾರಿಗೆ ಮಂಜೂರಾತಿ ನೀಡಿದ್ದು ಯಾವಾಗ;

ಆ) ಈ ಕಾಮಗಾರಿ ಆರಂಭವಾಗಿದ್ದು ಯಾವಾಗ;

ಇ) ಯಾವ ಕಾಲಮಿತಿಯೊಳಗೆ ಮುಗಿಯಬೇಕಾಗಿತ್ತು;

ಈ) ಈ ಕಾಮಗಾರಿಯು ತೀವ್ರ ವಿಳಂಬ ಗತಿಯಿಂದ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಈ ಕಾಮಗಾರಿಯು ತೀವ್ರ ವಿಳಂಬವಾಗುತ್ತಿರಲು ಕಾರಣವೇನು;

ಊ) ರಾಜ್ಯ ಹಾಗೂ ಕೇಂದ್ರ ಸರ್ಕಾರವು ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಮಾಡಿಕೊಂಡಿರುವ ಒಪ್ಪಂದವೇನು;

ಋ) ಈ ಕಾಮಗಾರಿಯ ಯೋಜನಾ ವೆಚ್ಚ ಎಷ್ಟು;

ಎ) ಇದುವರೆಗೂ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಬಿಡುಗಡೆ ಮಾಡಿರುವ ಹಣ ಎಷ್ಟು;

ಏ) ಬಿಡುಗಡೆ ಮಾಡಬೇಕಿರುವ ಬಾಕಿ ಹಣ ಎಷ್ಟು;

ಐ) ಬಾಕಿ ಉಳಿದಿರುವ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು;

ಒ) ಯಾವಾಗ ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಬಿ. ಶ್ರೀರಾಮುಲು (ಪ್ರವಾಸೋದ್ಯಮ, ಜವಳಿ ಹಾಗೂ ಮೂಲಸೌಲಭ್ಯ ಅಬಿವೃದ್ಧಿ ಸಚಿವರು) :

ಅ) 1994–1995. ರಾಜ್ಯ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: IDD 169 IDM 2002 ದಿನಾಂಕ : 3.10.2002ರಲ್ಲಿ ಯೋಜನೆಯನ್ನು ವೆಚ್ಚ ಆಧಾರಿಸಿ ಯೋಜನೆಯಾಗಿ ಕೈಗೊಳ್ಳಲು ಒಪ್ಪಿದೆ.